# ಪ್ರಕೃತಿ – ಪುರುಷ



ಕಾಳಿ ಎಂಬುವವಳು ಮತ್ತೆ ಬೇರೆ ಏನೂ ಅಲ್ಲ, ಯಾರು ಬ್ರಹ್ಮನೋ ಆತನೇ ಕಾಳಿ. ಕಾಳಿ ಎಂಬುವವಳೇ ಆ ಶಕ್ತಿ. ಯಾವಾಗ ಭಗವಂತ ನಿಷ್ಕ್ರಿಯನೋ ಆಗ ಆತನಿಗೆ ಬ್ರಹ್ಮ ಅಂತ ಹೆಸರು. ಯಾವಾಗ ಆತ ಸೃಷ್ಟಿ ಸ್ಥಿತಿ ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ ಆಗ ಆತನಿಗೇ ಶಕ್ತಿ ಅಂತ ಹೆಸರು. ಯಾರನ್ನು ನೀನು ಬ್ರಹ್ಮ ಅಂತ ಕರೆಯುತ್ತೀಯೋ, ಆತನನ್ನೇ ನಾನು ಕಾಳಿ ಅಂತ ಕರೆಯುತ್ತೇನೆ.

ಬ್ರಹ್ಮ ಕಾಳಿ ಅಭೇದ. ಇವರಿಗಿರುವ ಸಂಬಂಧ ಅಗ್ನಿಗೂ ಮತ್ತು ಅದರ ದಾಹಕ ಶಕ್ತಿಗೂ ಇರುವ ಸಂಬಂಧದ ಹಾಗೆ. ಅಗ್ನಿಯ ಭಾವನೆಯೊಡನೆ ಅದರ ದಾಹಕಶಕ್ತಿಯ ಭಾವನೆಯನ್ನೂ ಮಾಡಲೇಬೇಕಾಗುತ್ತದೆ. ಬ್ರಹ್ಮನನ್ನು ಸ್ವೀಕರಿಸಿತು ಎಂದರೆ ಕಾಳಿಯನ್ನು ಸ್ವೀಕರಿಸಲೇಬೇಕು; ಕಾಳಿಯನ್ನು ಸ್ವೀಕರಿಸಿತು ಎಂದರೆ ಬ್ರಹ್ಮನನ್ನು ಸ್ವೀಕರಿಸಲೇಬೇಕು. ಶಕ್ತಿ ಬ್ರಹ್ಮ ಅಭೇದ. ಬ್ರಹ್ಮನನ್ನೇ ಶಕ್ತಿ ಅಥವಾ ಕಾಳಿ ಅಂತ ನಾನು ಕರೆಯುವುದು.

ಸಚ್ಚಿದಾನಂದ ರಸಾಸ್ವಾದನೆ ಮಾಡಲೋಸುಗ ತಾನೇ ರಾಧಿಕೆಯನ್ನು ಸೃಷ್ಟಿಸಿದ್ದಾನೆ. ಸಚ್ಚಿದಾನಂದ ಕೃಷ್ಣನ ಅಂಗದಿಂದ ರಾಧಿಕೆ ಹೊರಹೊಮ್ಮಿದ್ದಾಳೆ. ಸಚ್ಚಿದಾನಂದ ಕೃಷ್ಣನೇ 'ಆಧಾರ', ಮತ್ತೆ ಆತನೇ ರಾಧಿಕೆಯ ರೂಪಿನಲ್ಲಿ 'ಆಧೇಯ.' ಸಚ್ಚಿದಾನಂದ ತನ್ನ ರಸವನ್ನು ತಾನೇ ಆಸ್ವಾದಿಸಲು, ಅಂದರೆ ತನ್ನನ್ನೇ ತಾನು ಪ್ರೀತಿಸಿ ಆನಂದಪಡಲು ರಾಧಿಕೆಯ ರೂಪದಿಂದ ವ್ಯಕ್ತವಾಗಿದ್ದಾನೆ.

ಯಾವಾಗ ಭಗವಂತ ಸೃಷ್ಟಿ–ಸ್ಥಿತಿ–ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ, ಆಗ ಆತನಿಗೇ ಸಗುಣಬ್ರಹ್ಮ ಅಥವಾ ಆದ್ಯಾಶಕ್ತಿ ಅಂತ ಹೆಸರು; ಯಾವಾಗ ಆತನನ್ನು ತ್ರಿಗುಣಾತೀತ ಎಂಬುದಾಗಿ ಭಾವಿಸುತ್ತೇವೆಯೋ, ಆಗ ಆತನಿಗೆ ವಾಙ್ಮನಾತೀತ ನಿರ್ಗುಣಬ್ರಹ್ಮ ಅಂತ ಹೆಸರು – ಪರಬ್ರಹ್ಮ ಅಂತ ಹೆಸರು.

ಯೋಗಮಾಯೆ ಎಂದರೆ ಪ್ರಕೃತಿ–ಪುರುಷರ ಸಂಯೋಗ. ಈ ಜಗತ್ತಿನಲ್ಲಿ ಏನೇನು ಕಣ್ಣಿಗೆ ಬೀಳುವುವೋ ಅವೆಲ್ಲವೂ ಈ ಸಂಯೋಗದಿಂದ ಉದ್ಭವವಾದುವು. ಉದಾಹರಣೆಗೆ ಶಿವಕಾಳಿಯರ ಮೂರ್ತಿ ತೆಗೆದುಕೊ. ಕಾಳಿ ಶಿವನ ಮೇಲೆ ನಿಂತುಕೊಂಡಿದ್ದಾಳೆ. ಶಿವ ಶವದ ಹಾಗೆ ಆಕೆಯ ಪಾದದ ಕೆಳಗೆ ಬಿದ್ದುಕೊಂಡಿದ್ದಾನೆ. ಕಾಳಿ ಆತನ ಕಡೆಗೆ ದೃಷ್ಟಿಸಿ ನೋಡುತ್ತಿದ್ದಾಳೆ. ಇವೆಲ್ಲವೂ ಪುರುಷ–ಪ್ರಕೃತಿಯರ ಸಂಯೋಗವನ್ನು ಸೂಚಿಸುತ್ತದೆ. ಪುರುಷ ನಿಷ್ಕ್ರಿಯ; ಅದಕ್ಕಾಗಿಯೇ ಶಿವ ಶವದ ಹಾಗೆ ನೆಲದ ಮೇಲೆ ಬಿದ್ದಿದ್ದಾನೆ. ಪುರುಷನ ಸಂಯೋಗದಿಂದ ಪ್ರಕೃತಿ ತನ್ನ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡುತ್ತಾಳೆ, ಸೃಷ್ಟಿ–ಸ್ಥಿತಿ–ಪ್ರಳಯ ಕಾರ್ಯಗಳನ್ನು ಮಾಡುತ್ತಾಳೆ, ರಾಧಾಕೃಷ್ಣರ ಯುಗಳ ಮೂರ್ತಿಗಳ ಸಂಕೇತವೂ ಇದೇನೆ. ಈ ಸಂಯೋಗಕ್ಕಾಗಿಯೇ ಆ ಪ್ರತಿಮೆಗಳು ಒಂದರ ಕಡೆ ಇನ್ನೊಂದು ಬಾಗಿರುವುದು.

ಇರುವುದು, 'ಏಕಮೇವಾದ್ವಿತೀಯಮ್' ಎಂದರೆ ಕೇವಲ ಒಂದೇ ಒಂದು. ಅದೇ ಪರಬ್ರಹ್ಮ. ಎಲ್ಲಿಯವರೆಗೆ ಭಗವಂತ ನಮ್ಮಲ್ಲಿ 'ಅಹಂ' ಎಂಬುದನ್ನು ಇಟ್ಟಿರುತ್ತಾನೋ ಅಲ್ಲಿಯವರೆಗೆ ಆತ ನಮಗೆ ತೋರಿಸಿಕೊಳ್ಳುತ್ತಾನೆ, ತಾನು ಆದ್ಯಾಶಕ್ತಿಯ ರೂಪದಿಂದ ಸೃಷ್ಟಿ, ಸ್ಥಿತಿ, ಪ್ರಳಯ ಮಾಡುತ್ತಿರುವುದಾಗಿ.

ಯಾರು ಬ್ರಹ್ಮನೋ ಆತನೇ ಆದ್ಯಾಶಕ್ತಿ. ಒಬ್ಬ ರಾಜ ಒಮ್ಮೆ ಒಬ್ಬ ಯೋಗಿಗೆ ಹೇಳಿದ, ತನಗೆ ಒಂದೇ ಒಂದು ಪದದಲ್ಲಿ ಬ್ರಹ್ಮಜ್ಞಾನ ದೊರಕಿಸಿಕೊಡಬೇಕು ಎಂಬುದಾಗಿ. ಯೋಗಿ ಹೇಳಿದ: 'ಆಗಲಿ, ಒಂದು ಪದದಿಂದಲೇ ನಿನಗೆ ಬ್ರಹ್ಮಜ್ಞಾನ ದೊರಕಿಸಿ ಕೊಡುತ್ತೇನೆ.' ಸ್ವಲ್ಪ ಹೊತ್ತಾದ ನಂತರ ಒಬ್ಬ ಮಂತ್ರವಾದಿ ದೊರೆಯ ಹತ್ತಿರಕ್ಕೆ ಇದ್ದಕ್ಕಿದ್ದ ಹಾಗೆ ಬರುತ್ತಾನೆ. ಆತ ಎರಡು ಬೆರಳುಗಳನ್ನು ಬಹಳವಾಗಿ ತಿರುಗಿಸುತ್ತಿರುವುದು ಮತ್ತು ಹೇಳುತ್ತಿರುವುದು: 'ರಾಜ, ಇಲ್ಲಿ ನೋಡು! ಇಲ್ಲಿ ನೋಡು!' ದೊರೆ ಆಶ್ಚರ್ಯಚಕಿತನಾಗಿ ನೋಡಲಾರಂಭಿಸುತ್ತಾನೆ. ಹಾಗೆ ನೋಡುತ್ತಿದ್ದ ಹಾಗೆ ಕೆಲವು ನಿಮಿಷಗಳ ನಂತರ ಎರಡು ಬೆರಳೂ ಕೂಡಿ ಒಂದೇ ಆಗಿಬಿಡುತ್ತದೆ. ಬಳಿಕ ಮಂತ್ರವಾದಿ ಆ ಒಂದೇ ಬೆರಳನ್ನು ಸುತ್ತುತ್ತ ಹೇಳುತ್ತಾನೆ: 'ರಾಜ, ಇಲ್ಲಿ ನೋಡು! ಇಲ್ಲಿ ನೋಡು! ಇದರ ಇಂಗಿತಾರ್ಥ, ಮೊದಮೊದಲು ಬ್ರಹ್ಮ ಮತ್ತು ಆದ್ಯಾಶಕ್ತಿ ಎರಡು ವಸ್ತು ಎಂಬ ಬೋಧೆಯಾಗುತ್ತದೆ. ಆದರೆ ಬ್ರಹ್ಮಜ್ಞಾನ ದೊರೆತ ನಂತರ ಅವು ಎರಡು ಎಂಬ ಬೋಧೆಯಾಗದು. ಆಗ ಅಭೇದ ಎಂಬ ಬೋಧೆ — ಒಂದೇ ಎಂಬ ಬೋಧೆ. ಏಕಮೇವಾದ್ವಿತೀಯಮ್ – ಅದ್ವೈತ ಎಂಬ ಬೋಧೆ.'

ಜಗದ್ಧಾತ್ರಿ ರೂಪದ ಸಂಕೇತ ನಿನಗೆ ಗೊತ್ತೆ? ಯಾರು ಈ ಜಗತ್ತನ್ನು ಧಾರಣಮಾಡಿಕೊಂಡಿದ್ದಾಳೊ ಅವಳು. ಆಕೆ ಈ ಜಗತ್ತನ್ನು ಹೊತ್ತುಕೊಂಡಿರದಿದ್ದರೆ, ಪಾಲಿಸದಿದ್ದರೆ ಅದು ತನ್ನ ಸ್ಥಾನದಿಂದ ಕೆಳಕ್ಕೆ ಬಿದ್ದು ನಾಶವಾಗಿಬಿಡುತ್ತದೆ. ಮನಸ್ಸೆಂಬ ಆನೆಯನ್ನು ಯಾರು ವಶಪಡಿಸಿಕೊಳ್ಳುತ್ತಾನೊ ಆತನ ಹೃದಯದಲ್ಲಿ ಆಕೆ ವ್ಯಕ್ತವಾಗುತ್ತಾಳೆ.

ಯಾರು ಶ್ಯಾಮೆಯೋ ಆತನೇ ಬ್ರಹ್ಮ. ಯಾರು ಸಾಕಾರನೋ ಆತನೇ ನಿರಾಕಾರ. ಯಾರು ಸಗುಣನೋ ಆತನೇ ನಿರ್ಗುಣ. ಬ್ರಹ್ಮನೇ ಶಕ್ತಿ; ಶಕ್ತಿಯೇ ಬ್ರಹ್ಮ. ಇಬ್ಬರಿಗೂ ಭೇದವಿಲ್ಲ. ಯಾರು ಸಚ್ಚಿದಾನಂದಮಯನೋ ಆತನೇ ಸಚ್ಚಿದಾನಂದಮಯಿ.

**'ಶ್ರೀರಾಮಕೃಷ್ಣ ವಚನವೇದ'** ದಿಂದ